6. ಉಳ್ಳಾಲ ವಿಧಾನ ಸಭಾ ಕ್ಷೇತ್ರಕ್ಕೆ ಒಳಪಟ್ಟ 15 ಗ್ರಾಮಗಳ ಮನೆ ನಿವೇಶನ ಹೊಂದಿರುವ ಬಡಾವಣೆಗಳಲ್ಲಿ ಕುಡಿಯುವ ನೀರಿನ ಅಭಾವ

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ): ಮಾನ್ಯ ಅಧ್ಯಕ್ಷರೆ, ಉಳ್ಳಾಲ ವಿಧಾನ ಸಭಾ ಕ್ಷೇತ್ರಕ್ಕೆ ಒಳಪಟ್ಟ 15ಗ್ರಾಮಗಳ ಮನೆ ನಿವೇಶನ ಹೊಂದಿರುವ ಬಡವಾಣೆಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ತಲೆದೋರಿದ್ದು, ಈಗಾಗಲೇ 5 ಕಡೆಗಳಲ್ಲಿ ನಿರ್ಮಿಸಿರುವ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಆಳವಡಿಸಿರುವ ಕೊಳವೆ ಬಾವಿಗಳು ಪೂರ್ತಿ ಹಾಳಾಗಿದ್ದು ಬದಲಿ ನೀರಿನ ವ್ಯವಸ್ಥೆಗೆ ತುರ್ತು ಆಗಿ ಕಾಮಗಾರಿಯನ್ನು ರಚಿಸಲು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ಗೆ ಕನಿಷ್ಠ 50 ಲಕ್ಷ ರೂಪಾಯಿಗಳನ್ನು ಒದಗಿಸಬೇಕಾಗಿ ಕರ್ನಾಟಕ ಸರ್ಕಾರವನ್ನು ಈ ಸಭೆಯ ಮೂಲಕ ಒತ್ತಾಯಿಸುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ದಿವಸವೇ ಹೆಚ್ಚಿನ ಮಾಹಿತಿಯನ್ನು ತರಿಸಿಕೊಂಡು ಉತ್ತರ ಆಮೇಲೆ ಹೇಳುತ್ತೇನೆ. ಏಕೆಂದರೆ ಮಾನ್ಯ ಸದಸ್ಯರು 50ಲಕ್ಷ ರೂಪಾಯಿ ಬಿಡುಗಡೆ ಮಾಡಬೇಕೆಂದು ಕೇಳಿದ್ದಾರೆ. ಅದಕ್ಕೆ ಅನುಮತಿ ಇದೆಯೋ ಇಲ್ಲವೊ ಅದನ್ನು ಪರಿಶೀಲನೆ ಮಾಡಬೇಕಾಗಿದೆ. ಇನ್ನೂ ಸ್ವಲ್ಪ ಸಮಯದಲ್ಲಿ ಎಲ್ಲಾ ಮಾಹಿತಿಗಳನ್ನು ಒದಗಿಸಿಕೊಡುತ್ತೇನೆ.

7. ಶಿವಮೊಗ್ಗ ಪೌರಸಭೆಯನ್ನು ಮಹಾನಗರ ಪಾಲಿಕೆಯಾಗಿ ಪರಿವರ್ತನೆ

ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಮಹಾನಗರಪಾಲಿಕೆಯಾಗಿ ಆಗಿನ ಮುಖ್ಯ ಮಂತ್ರಿಗಳಾಗಿದ್ದ ಬಂಗಾರಪ್ಪನವರು ಅವರ ಕಾಲದಲ್ಲಿ ಪರಿವರ್ತನೆ ಮಾಡಿದ್ದರು. ಆದಾದ ನಂತರ ಮೊಯಿಲಿಯವರ ಸರ್ಕಾರ ಬಂದಾಗ ಅದನ್ನು ರದ್ದು ಪಡಿಸಿದ್ದಾರೆ. ಇದರಿಂದ ಕೆಲವು ಗ್ರಾಮಗಳ ಸಾರ್ವಜನಿಕರಿಗೆ ತೊಂದರೆಯಾಗಿದೆ. ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಂದರೆ ಶಿವಮೊಗ್ಗ ನಗರಕ್ಕೆ ಹೊಂದಿಕೊಂಡಂತೆ 15-20ಗ್ರಾಮಗಳು ಹೊಸ ನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರುತ್ತವೆ. ಅಲ್ಲಿನ ಜನಗಳಿಗೆ ನೀರು, ದೀಪ, ರಸ್ತೆ ಸೌಲಭ್ಯಗಳು ಸಿಗುತ್ತಿಲ್ಲ, ಕನಿಷ್ಠ ಸೌಲಭ್ಯಗಳೂ ಸಹ ದೊರಕುತ್ತಿಲ್ಲ, ಇವುಗಳ ಸಮಸ್ಯೆ ಬಂದಾಗ ನಗರ ಪಾಲಿಕೆ ಅಧಿಕಾರಿಗಳನ್ನು ಸಂಪರ್ಕ ಮಾಡಿದಾಗ ಅದು ನಮಗೆ ಸೇರಿಲ್ಲವೆಂದು ಹೇಳುತ್ತಾರೆ. ಅಲ್ಲಿ ಯಾವ ಪಂಚಾಯಿತಿಯ ಚುನಾವಣೆಯಲ್ಲೂ ಆಗಲಿಲ್ಲ, ಅವರು ಮಹಾ ನಗರಪಾಲಿಕೆಗೆ ಸೇರಿದೆಯೆಂದು ಹೇಳುತ್ತಾರೆ. ಅವರು ಈ ಕಡೆಗೂ ಇಲ್ಲ ಆ ಕಡೆಗೂ ಇಲ್ಲ, ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ದಯಮಾಡಿ ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣವನ್ನು ನೀಡಬೇಕು. ನಾಗರೀಕರಿಗೆ ಸೌಲಭ್ಯಗಳು ದೊರಕುವ ಹಾಗೆ ಮಾಡಬೇಕು.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯವರು ದಿನಾಂಕ 14-7-92ರಂದು ಅಧಿಸೂಚನೆಯಲ್ಲಿ ಗಾಡಿಕೊಪ್ಪ, ನಿಧಿಗೆ, ಮಲಗಗೊಪ್ಪ, ಕಡದಕಟ್ಟೆ ಮತ್ತು ಹಿರಿಯೂರು ಮಂಡಲ ಪಂಚಾಯಿತಿಗಳನ್ನು ಶಿವಮೊಗ್ಗ ಮಹಾನಗರ ಪಾಲಿಕೆಯಲ್ಲಿ ಸೇರಿಸಿ ದಿನಾಂಕ 18-7-92ರ ರಾಜ್ಯಪತ್ರದಲ್ಲಿ ಪ್ರಕಟಿಸಿದೆ. ಪ್ರಾಯಶಃ ನಗರಾಭಿವೃದ್ಧಿ ಸಚಿವರು ಉತ್ತರ ಹೇಳಬೇಕಾಗುತ್ತದೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಹೇಳಿದ್ದುದು ಸಾಬೀತಾಯಿತು.